ಸಿ.ಸಿಃ 804/ 2025
ಪಿ.ಡಬ್ಲ್ಯೂ -01

ದಿನಾಂಕಃ 13-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಸಾಲ ಕೊಡವಾಗ ಪಿರ್ಯಾದಿ ಸಂಸ್ಥೆಯಲ್ಲಿ ನಾನು ಶಾಖಾ ನಿಬಂಧಕರಾಗಿ ಇರಲಿಲ್ಲ . ಸಾಲ ಕೊಡುವ ಸಮಯದಲ್ಲಿ ನಿಬಂಧಕರಾಗಿ ಸುಬ್ಬಣ್ಣ ಎನ್ನುವವರು ಇದ್ದರು. ಸುಬ್ಬಣ್ಣ ರವರು ಬಹಳಷ್ಟು ಜನರಿಗೆ ಸಾಲ ಕೊಡುವ ವಿಚಾರದಲಿ ಮೋಸ ಮಾಡಿದ್ದಾರೆ ಎಂದು ಹಲವಾರು ದೂರುಗಳನ್ನು ಜನರು ಕೊಟ್ಟಿದ್ದರು ಎಂದರೆ ಸರಿ . ಸುಬ್ಬಣ್ಣ ರವರ ವಿರುದ್ದ ಬ್ಯಾಂಕ್ ನಿಂದ ತನಿಖೆ ಆಗಿತ್ತು ಎಂದರೆ ಸರಿ . ಸುಬ್ಬಣ್ಣ ರವರು ಆತ್ಮಹತ್ಯೆ ಮಾಡಿಕೊಂಡರು ಎಂದರೆ ಸರಿ . ಸುಬ್ಬಣ್ಣ ರವರಿಂದ ಮೋಸ ಆಗಿದೆ ಎಂದು ಸುಮಾರು 200 ಜನರು ಬ್ಯಾಂಕ್ ನ ವಿರುದ್ದ ಬೇರೆ ಬೇರೆ ಇಲಾಖೆಗಳಿಗೆ ದೂರನ್ನು ಕೊಟ್ಟಿರುತ್ತಾರೆ ಎಂದರೆ ಸರಿ . ಈ ಬಗ್ಗೆ ಸಹಕಾರಿ ಇಲಾಖೆಯಲ್ಲಿ ವಿಚಾರಣೆ ನಡೆಯುತಿದೆ ಎಂದರೆ ಸರಿ .

ಸಾಲ ಕೊಡುವಾಗ ಸಾಲದ ಕರಾರು , ಡೆಬಿಟ್ ಸ್ಲಿಪ್ , ಡಿಪಿಎನ್ , ಆದಾಯ ತೆರಿಗೆ ರಿಟನ್ಸ್ ಮತ್ತು ಕೆವೈಸಿಗಳನ್ನು ಪಡೆಯುತ್ತೇವೆ. ಸಾಲ ಕೊಡುವ ಸಮಯದಲ್ಲಿ ನಾವು ಚೆಕ್ ನ್ನು ಪಡೆಯುವುದಿಲ್ಲ. ಸಾಲ ಕೊಡುವ ಸಮಯದಲ್ಲಿ ನಾವು ಸಾಲ ಪಡೆಯುವವರನ್ನು ನಮ್ಮ ಬ್ಯಾಂಕ್ ನ ಸದಸ್ಯರನ್ನಾಗಿ ಮಾಡಿಕೊಳ್ಳುತ್ತೇವೆ ಎಂದರೆ ಸರಿ. ಈಗ ಆರೋಪಿಯ ಸದಸ್ಯತ್ವ ಸಂಖ್ಯೆ ಎಷ್ಟು ಎಂದು ಹೇಳಲು ಸಾದ್ಯವಿಲ್ಲ, ದಾಖಲೆ ನೋಡಿ ಹೇಳಬೇಕಾಗುತ್ತದೆ ಎಂದು ತಿಳಿಸಿರುತ್ತಾರೆ. ಸದಸ್ಯತ್ವದ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇಲ್ಲ . ಸಾಲಕ್ಕೆ ಸಂಬಂದಪಟ್ಟಂತೆ ಎಲ್ಲಾ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ . ನಿಪಿ 8 ನ್ನು ನಾನೇ ಹಾಜರುಪಡಿಸಿರುತ್ತೇನೆ ಎಂದರೆ ಸರಿ . ನಿಪಿ 8 ಶಾಖೆಯ ಪ್ರಬಂಧಕರಾಗಿ ನನ್ನ ಸುಪರ್ದಿಯಲ್ಲಿ ಇರುತ್ತದೆ . ಸಾಲ ಕೊಟ್ಟ ಲೋನ್ ಅಕೌಂಟ್ ನಂ 92000183986. ಸಾಲದ ಖಾತೆ ಅಲ್ಲದೇ ಉಳಿತಾಯ ಖಾತೆ ಕೂಡ ನಮ್ಮ ಬ್ಯಾಂಕ್ ನಲ್ಲಿ ಇರುತ್ತದೆ . ಸಾಲವನ್ನು ಕೊಡುವಾಗ ಉಳಿತಾಯ ಖಾತೆಗೆ ನಾವು ಹಣ ಹಾಕುತ್ತೇವೆ . ಸಾಲ ವಾಪಸ್ಸು ಕಟ್ಟುವಾಗ ನೇರವಾಗಿ ಸಾಲದ ಖಾತೆಗೆ ಕಟ್ಟಬಹುದು ಅಥವಾ ಉಳಿತಾಯ

ಖಾತೆಗೆ  ಹಾಕಿದರೇ ನಾವು ಅಲ್ಲಿಂದ ಸಾಲದ ಖಾತೆಗೆ ಜಮೆ ಮಾಡುತ್ತೇವೆ. ಈ ಪ್ರಕರಣದಲ್ಲಿ ಆರೋಪಿ ಉಳಿತಾಯ ಖಾತೆಗೆ ಹಣ ಹಾಕಿರುತ್ತಾರೆ . ಆರೋಪಿ ಎಷ್ಟು ಹಣ ಹಾಕಿರುತ್ತಾರೆ ಎಂದು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ದಾಖಲೆ ನೋಡಿ ಒಟ್ಟು ರೂ 37,800 ಕಟ್ಟಿರುತ್ತಾರೆ .  ಆರೋಪಿ ಸುಮಾರು ರೂ 58,598/- ಹಣ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರಿದು ಅದು ಎನ್ ಪಿ ಎ ಆಗಿರುತ್ತದೆ ತದನಂತರ ಅದು ರಿವರ್ಸ್ ಆಗುತ್ತದೆ ಎಂದು ತಿಳಿಸಿರುತ್ತಾರೆ . ಸಾಲದ ಖಾತೆಗೆ ಬಡ್ಡಿಯನ್ನು ಜಮೆ ಮಾಡಿದ  ರೀತಿ ತೋರಿಸಿರುತ್ತೇವೆ ನಂತರ ಎನ್ ಪಿ ಎ ಆಗುವಾಗ ಅದು ರಿವರ್ಸ್ ಆಗಿ ಬಾಕಿ ಆಗುತ್ತದೆ . ದಿ 31-03-2023 ರಂದು ಎನ್ ಪಿ ಎ  ಆಗಿರುತ್ತದೆ . ಆ ಬಗ್ಗೆ ದಾಖಲೆ ಇರುವುದಿಲ್ಲ ಆದರೇ ಕಂಪ್ಯೂಟರ್ ನಲ್ಲಿ ಈ ಬಗ್ಗೆ ಕಾಣಿಸಲಾಗಿದೆ ಮತ್ತು ಅದು ಬ್ಯಾಂಕ್ ಸ್ಟೇಟ್ ಮೆಂಟ್ ನಲ್ಲಿ ಕೂಡ ಕಾಣಿಸುತ್ತಿದೆ ಎಂದು ತಿಳಿಸಿರುತ್ತಾರೆ . ನಾವು ಸಾಲವನ್ನು  ವಾಪಸ್ಸು ಕೇಳಲು ಹೋದಾಗ ಚೆಕ್ ಕೊಟ್ಟಿರುತ್ತಾರೆ . 10-10-2024 ರಂದು ನಾವು ಹಣ ಕೇಳಲು ಹೋದಾಗ ಚೆಕ್ ನ್ನು ಅವರ ಅಪಾರ್ಟ್ ಮೆಂಟ್ ನಲ್ಲಿ ಆರೋಪಿ ಕೊಟ್ಟಿರುತ್ತಾರೆ. ನ್ಯಾಯಾಲಯಕ್ಕೆ ಸಲ್ಲಿಸಿರುವ ಚೆಕ್ ನ್ನು ಬಿಟ್ಟು ಆರೋಪಿಯ ಬೇರೆ ಚೆಕ್ ಗಳು ನಮ್ಮ ಬಳಿ ಇಲ್ಲ. 10-10-2024 ಕ್ಕೆ ನಮ್ಮ ಕಂಪ್ಯೂಟರ್ ನಲ್ಲಿ ಆರೋಪಿಯಿಂದ ಎಷ್ಟು ಹಣ ಬರಬೇಕಾಗಿತ್ತು ಅಷ್ಟಕ್ಕೆ ಚೆಕ್ ಕೊಟ್ಟಿರುತ್ತಾರೆ . ಎಷ್ಟು ಬಾಕಿ ಇದೆ ಎಂದು ನಾವೇ ಆರೋಪಿಗೆ ಹೇಳಿರುತ್ತೇವೆ. ಚೆಕ್ ಕೊಟ್ಟ 10-10-2024 ಕ್ಕೆ ಆರೋಪಿ ಎಷ್ಟು ಹಣ ಕೊಡಬೇಕಾಗಿತ್ತು ಅಷ್ಟು ಹಣಕ್ಕೆ ಚೆಕ್ ಕೊಟ್ಟಿರುತ್ತಾರೆ. 10-10-2024 ಕ್ಕೆ ಎಷ್ಟು ಹಣ ಸ್ಟೇಟ್ಮೆಂಟ್ ನಲ್ಲಿ ಕಾಣಿಸಲಾಗಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ರೂ 1,83,547/- ಇರುತ್ತದೆಸಾಕ್ಷಿ ಮುಂದುವರಿದು ಅದು ಎನ್ ಪಿ ಎ ಆದ ನಂತರ ರಿವರ್ಸ್ ಆಗಿರುವುದರಿಂದ ಅಷ್ಟು ಹಣ ಕಾಣಿಸಲಾಗಿದೆ ಎಂದು ತಿಳಿಸಿರುತ್ತಾರೆ. 10-10-2024 ಕ್ಕೆ ಚೆಕ್ ನಲ್ಲಿ ಕಾಣಿಸಿರುವಷ್ಟು ಮೊತ್ತ ಬಾಕಿ ಇತ್ತು ಎಂದು ತೋರಿಸಲು ನಮ್ಮ ಬಳಿ ಬೇರೆ ದಾಖಲೆ ಇರುತ್ತದೆ. ಸದ್ರಿ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇಲ್ಲ. ಸಾಕ್ಷಿ ಮುಂದುವರಿದು ಸದ್ರಿ ದಾಖಲೆಗಳು ನಮ್ಮ ಬ್ಯಾಂಕ್ ನ ಕಂಪ್ಯೂಟರ್ ನಲ್ಲಿ ಇರುತ್ತದೆ ಎಂದು ತಿಳಿಸಿರುತ್ತಾರೆ . ಆರೋಪಿ ಹಣ ಕಟ್ಟಿದ ಬಗ್ಗೆ ನಮ್ಮ ಬಳಿ ರಸೀದಿ ಇರುತ್ತದೆ . ಅವುಗಳನ್ನು ಬೇಕಾದರೇ ಹಾಜರುಪಡಿಸುತ್ತೇನೆ . ಸಾಲಕ್ಕೆ ರಾಜ ಜಿ ಕೋಟ್ಯಾನ್ ಮತ್ತು ಸುನಿಲ್ ಕುಂದರ್ ಜಾಮೀನುದಾರರು ಆಗಿರುತ್ತಾರೆ . ಅವರ ಸದಸ್ಯತ್ವವನ್ನು

ಕೂಡ ಮಾಡಿರುತ್ತೇವೆ. ಈ ಸಾಲಕ್ಕೆ ಜಾಮೀನುದಾರರಾಗಿದ್ದವರೂ ಕೂಡ ಬೇರೆ ಸಾಲಕ್ಕೆ ಕೂಡ ಜಾಮೀನುದಾರರಾಗಿರುತ್ತಾರೆ. ಆರೋಪಿ ಕೂಡ ಬೇರೆಯವರ ಸಾಲಕ್ಕೆ ಜಾಮೀನುದಾರರಾಗಿರುತಾರೆ. ನಾವು ಹೇಳುವಷ್ಟು ಸಾಲವನ್ನು ಆರೋಪಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ . ನಾವು ಹೇಳುವಷ್ಟು ಮೊತ್ತಕ್ಕೆ ಆರೋಪಿ ಚೆಕ್ ನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಿಂದ ಪಡೆದ ಖಾಲಿ ಚೆಕ್ ನ್ನು ನಾವು ದುರುಪಯೋಗಪಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ . ಈ ಪ್ರಕರಣದಲ್ಲಿ ನಾವು Arbitration proceedings ಕೂಡ ಮಾಡಿದ್ದೇವೆ ಮತ್ತು ಅದು ಅವಾರ್ಡ್ ಆಗಿರುತ್ತದೆ. ಆರೋಪಿ ನಮ್ಮ ವಿರುದ್ದ ಪತ್ರಿಕೆಗಳಲ್ಲಿ ಹಲವಾರು ಬೈಟ್ ಗಳನ್ನು ಕೊಟ್ಟು ನಾವು ಮಾಡಿದ ತಪ್ಪನ್ನು ಎತ್ತಿ ತೋರಿಸಿರುತ್ತಾರೆ ಎಂದರೆ ಸಾಕ್ಷಿ ನಾವು ತಪ್ಪು ಮಾಡಿಲ್ಲ ಆದರೇ ಪತ್ರಿಕೆಗಳಲ್ಲಿ ಹೇಳಿದ್ದಾರೆ . ಆ ಕಾರಣಕ್ಕೆ ನಾವು ಆರೋಪಿ ವಿರುದ್ದ ಈ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ .

**ಮುಂದುವರಿದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು , ನೀಡಲಾಯಿತು .**

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದರು.

ಪ್ರ.ಹಿ.ಸಿ.ನ್ಯಾ ಮತ್ತು ಸಿ.ಜೆ.ಎಂ
ಉಡುಪಿ.